ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ವಸತಿ /ವಾಣಿಜ್ಯ ನಿವೇಶನಗಳ ಇ-ಹರಾಜು

ಇ-ಹರಾಜು ಆರಂಭಗೊಳ್ಳುವ ದಿನಾಂಕ: 13.05.2025

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಸತಿ/ವಾಣಿಜ್ಯ ನಿವೇಶನಗಳ ಇ-ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಾಣಿಜ್ಯ ನಿವೇಶನಗಳು ಮತ್ತು ಮೂಲೆ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು **"ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ"** ಹರಾಜು ಮಾಡಲಾಗುವುದು.

ಪ್ರತಿ ಚ.ಮೀ.ಗೆ ರೂ.500/- ಗಳ ಗುಣಕಗಳಲ್ಲಿ ಬಿಡ್ ದರದ ಕನಿಷ್ಠ ಏರಿಕೆ

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 06.06.2025, ಸಂಜೆ 5.00 ಗಂಟೆಗೆ

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 09.06.2025ರ ಬೆಳಿಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 10.06.2025ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

Sl. No.	Layout	Block	Sy.No.	Site No.	E-W (In Mtrs)	N-S (In Mtrs)	Total Area (in Sqm)	Rate per sq mtr	Engineer Contact No.
1	JP Nagar 8th Stage, Kothanur	1st	169/2, 169/3	-	53.00	(35.50+16.00)2	1364.75	100000	8660907357
2	JP Nagar 8th Stage, Kothanur	1st	169/2, 169/3	-	(44.20+41.30)/2	(35.50+19.80)2	1140.45	100000	8660907357
3	OMBR Layout, Banasawadi Village		173/12		As per sketch	As per sketch	27 Guntas	170000	9740148148
4	BTM 4th Stage, Devarachikkanahalli	2nd	24/5	-	99.70	(3.70+16.20)/2	992.01	130000	8660907357
5	Banashankari 6th Stage, Hemmigepura Village	2nd		1263/A	18.00	(26.00+30.00)/2	504.00	70500	9591964603
6	Further Extension of Banashankari 6th Stage, Thalaghattapura	4th 'T'		214	24.00	(19.00+25.00)/2	528.00	69300	9591964603
7	BTM 4th Stage, Devarachikkanahalli	2nd		1219	12.19	(22.20+21.60)/2	266.96	130000	8660907357
8	Banashankari 6th Stage, Hemmigepura Village	3rd		2020	(27.50+43.00)/2	12.00	423.00	74100	9591964603
9	Banashankari 6th Stage, Sompura	7th		1373	12.00	(15.00+28.00)/2	258.00	62300	9844916955
10	Further Extension of Banashankari 6th Stage, BM Kaval	4th 'B'		547	(28.20+21.00)/2	24.00	590.40	69300	9591964603

ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1. ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2. ಪ್ರತಿ ನಿವೇಶನಕ್ಕೆ ಇ.ಎಂ.ಡಿ ಮೊತ್ತ **ರೂ.50.00 ಲಕ್ಷಗಳನ್ನು** (ರೂ.ಐವತ್ತು ಲಕ್ಷ ಮಾತ್ರ) ನಿಗದಿಗೊಳಿಸಿದ್ದು, ಸದರಿ ಮೊತ್ತವನ್ನು ಹಾಗೂ ಇ-ಹರಾಜಿನ ಶುಲ್ಕವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿರುವಂತೆ ಪಾವತಿ ಮಾಡಬೇಕು. ಆದರೆ ಸದರಿ ಮೊತ್ತವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಖಾತೆಗೆ ಪಾವತಿಸಬಾರದು. ಇ-ಹರಾಜು ಪೋರ್ಟಲ್ ಬದಲಿಗೆ ಬಿಡಿಎ ಖಾತೆಗೆ ಸಲ್ಲಿಸಿದರೆ ಮರುಪಾವತಿಯ ಸಮಯದಲ್ಲಿ ಇಎಂಡಿ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.
3. ಯಶಸ್ವಿ ಬಿಡ್ಡುದಾರರಿಗೆ/ ಅತಿ ಹೆಚ್ಚಿನ ಬಿಡ್ಡುದಾರರಿಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ 25% ರಷ್ಟು ಮೌಲ್ಯದಲ್ಲಿ ಇ.ಎಂ.ಡಿ ಮೊತ್ತ **ರೂ.50.00 ಲಕ್ಷಗಳನ್ನು** ಕಡಿತಗೊಳಿಸಿ ಬಾಕಿ ಮೌಲ್ಯವನ್ನು **ದಿ: 16.06.2025 ರ ಗಂಟೆ 23.59.00 ರೊಳಗೆ** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಪಾವತಿ ಮಾಡಿ ಚಲನ್‌ಗಳನ್ನು ಆರ್ಥಿಕ ಶಾಖೆಯ ಮುಖ್ಯ ಲೆಕ್ಕಾಧಿಕಾರಿ, ಡಿ.ಬ್ಲಾಕ್, 2ನೇ ಮಹಡಿ, ಕೊಠಡಿ ಸಂಖ್ಯೆ:308ಗೆ ಸಲ್ಲಿಸಲು E-Auction Advice Letter ನ್ನು ಇ-ಮೇಲ್ ಮುಖೇನ ಕಳುಹಿಸಲಾಗುವುದು. ನಿಗದಿತ ಸಮಯದೊಳಗೆ 25% ಮೌಲ್ಯವನ್ನು ಪಾವತಿಸಲು ವಿಫಲವಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

   ಬ್ಯಾಂಕ್‌ನ ಹೆಸರು: ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು - 560020

   ಉಳಿತಾಯ ಖಾತೆಯ ಹೆಸರು: ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

   ಉಳಿತಾಯ ಖಾತೆ ಸಂಖ್ಯೆ: 2828101053014 ಐ.ಎಫ್.ಎಸ್.ಸಿ ಕೋಡ್: CNRB0002828

   ಪಾವತಿಯ ವಿಧಾನ: ಆರ್.ಟಿ.ಜಿ.ಎಸ್ /ಎನ್.ಇ.ಎಫ್.ಟಿ

   ಬಿಡ್ಡುದಾರರು ತಮ್ಮ ಸ್ವಂತ ಬ್ಯಾಂಕ್ ಖಾತೆಯಿಂದ ಮಾತ್ರ ಇಎಂಡಿ/ 25% ಹಣವನ್ನು ಪಾವತಿಸಬೇಕು.
4. ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ/ ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಇಚ್ಛಿಸುವ ಭಾರತೀಯ ಅನಿವಾಸಿಗರು (NRI) ಸ್ವ-ಪ್ರಮಾಣ ದೃಢೀಕರಣ ಪತ್ರ (Self Attested) ವನ್ನು ಅಪ್‌ಲೋಡ್ ಮಾಡಬಹುದು. ಯಶಸ್ವಿ ಬಿಡ್‌ದಾರರು ತದನಂತರ ಭಾರತೀಯ ರಾಯಭಾರಿ ಕಛೇರಿ (ಎಂಬೆಸ್ಸಿ) ಯಿಂದ ಪಡೆದ ದೃಢೀಕೃತ ಪತ್ರವನ್ನು ನೀಡಬೇಕು.
5. ಯಶಸ್ವಿ ಬಿಡ್ಡುದಾರರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದು.
6. ಯಶಸ್ವಿಯಾಗದ ಬಿಡ್ಡುದಾರರಿಗೆ ಇಎಂಡಿ ಹಣ 50 ಲಕ್ಷ ರೂ.ಗಳನ್ನು ಒಂದು ತಿಂಗಳ ಒಳಗಾಗಿ ಅವರ ಖಾತೆಗೆ ಹಿಂತಿರುಗಿಸಲಾಗುವುದು.
7. **ಇನ್ನಿತರೆ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳಿಗೆ ನಮ್ಮ ವೆಬ್‌ಸೈಟ್ : www.kbda.karnataka.gov.in ಗೆ ಭೇಟಿ ನೀಡಿ.**
8. **ಇ-ಹರಾಜು ನಿರ್ವೇಶನಗಳಿಗೆ ಕನಿಷ್ಠ 2 ಬಿಡ್‌ದಾರರು ಇರಬೇಕು ಮತ್ತು ಮೂಲ ಬೆಲೆಯ ಮೇಲೆ ಶೇ. 10ರಷ್ಟು ಕನಿಷ್ಠ ಹೆಚ್ಚಳವಿರಬೇಕು. ಒಬ್ಬರೇ ಬಿಡ್‌ದಾರರನ್ನು ತಿರಸ್ಕರಿಸಲಾಗುವುದು.**
9. ಬಿಡ್ಡಿಂಗ್ ಸಮಯದಲ್ಲಿ, ಅದೇ ನಿವೇಶನಕ್ಕೆ ಅಡ್ಡ ಹೆಸರುಗಳ ಯಾವುದೇ ನಕಲು ಇದ್ದರೆ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.
10. ಇ-ಹರಾಜು ಬಿಡ್ಡುದಾರರು ವೆಬ್‌ಸೈಟ್: **https://kppp.karnataka.gov.in** ಗೆ ಲಾಗ್‌ಇನ್ ಮಾಡುವ ಮೂಲಕ ಹೊಸ ಇ-ಹರಾಜು ಬಿಡ್ಡಿಂಗ್ ಬಳಕೆದಾರರ ಕೈಪಿಡಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ಸಂಪರ್ಕಿಸಿ: 080-46010000 ಮತ್ತು 080-68948777.
11. ಬಿಡ್ಡುದಾರರು ನಿಗದಿತ ಮಾದರಿ ಸಹಿ ನಮೂನೆಯನ್ನು (ಇದರಲ್ಲಿನ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ) ಮತ್ತು ಸಂಪರ್ಕ ಮಾಹಿತಿ ಸ್ವರೂಪವನ್ನು ವೆಬ್‌ಸೈಟ್ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿ, ವಿವರಗಳನ್ನು ಭರ್ತಿ ಮಾಡಿ ಮತ್ತು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡುವುದು.
12. ನಿವೇಶನದ ಜಂಟಿ ಖರೀದಿದಾರರು ಒದಗಿಸಿದ ಸ್ವರೂಪದಲ್ಲಿ ಜಂಟಿ ಹೆಸರನ್ನು ನಿರ್ದಿಷ್ಟಪಡಿಸಬೇಕು ಮತ್ತು ಇ-ಹರಾಜು ಪೋರ್ಟಲ್‌ನಲ್ಲಿ ತಮ್ಮ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮದುವೆ ಪ್ರಮಾಣಪತ್ರ, ಪಾಸ್‌ಪೋರ್ಟ್ ಅಥವಾ ಯಾವುದೇ ಇತರ ಸರ್ಕಾರ ನೀಡಿದ ದಾಖಲೆಗಳನ್ನು ಜಂಟಿಯಾಗಿ ಅಪ್‌ಲೋಡ್ ಮಾಡಬೇಕು. ಜಂಟಿ ನೋಂದಣಿಗಾಗಿ ತಡವಾಗಿ ಸಲ್ಲಿಸುವ ವಿನಂತಿಗಳನ್ನು ತಿರಸ್ಕರಿಸಲಾಗುತ್ತದೆ.
13. ಯಶಸ್ವಿ ಬಿಡ್ಡುದಾರರಿಗೆ ಹರಾಜಾದ ನಿವೇಶನಗಳನ್ನು ಅವು ಹೇಗಿದೆಯೋ ಅದೇ ಸ್ಥಿತಿಯಲ್ಲಿ ಹಂಚಲಾಗುತ್ತದೆ. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಬಿಡ್ ಮಾಡುವ ಮೊದಲು ನಿವೇಶನವಿರುವ ಸ್ಥಳ, ರಸ್ತೆಯ ಅಗಲ ಇತ್ಯಾದಿ ವಿಷಯಗಳನ್ನು ಭೌತಿಕವಾಗಿ ಪರಿಶೀಲಿಸಬೇಕು. ಇ-ಹರಾಜಿನ ಮೂಲಕ ನೀಡಲಾದ ನಿವೇಶನಗಳನ್ನು ರದ್ದುಗೊಳಿಸಲಾಗುವುದಿಲ್ಲ / ಬದಲಿಯಾಗಿ ನೀಡಲಾಗುವುದಿಲ್ಲ.
14. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಮೇಲೆ ನಿರ್ದಿಷ್ಟಪಡಿಸಿದ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧವಾಗಿರಬೇಕು.
15. ಇ-ಹರಾಜಿಗೆ ಸಂಬಂಧಿಸಿದಂತೆ ಬಿಡ್ಡುದಾರರು ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸದೇ ನೇರವಾಗಿ ಪ್ರಾಧಿಕಾರವನ್ನು ಸಂಪರ್ಕಿಸುವುದು.

ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ-ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ https://kppp.karnataka.gov.in ಲಾಗಾನ್ ಆಗಿ
ಬಿಡಿಎ ವಾಣಿಜ್ಯ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ 080-23368435 /23368036 ಹಾಗೂ ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ 080-46010000 /68948777 ಸಂಪರ್ಕಿಸಿ

ನಂ. ಬೆಂಅಪ್ರಾ/ಅಸ/ಇ-ಹರಾಜು/ಟಿ-02/2025-26, ದಿನಾಂಕ: 07.05.2025

ಸಹಿ/- ಅಭಿಯಂತರ ಸದಸ್ಯರು